

ಗೂಡಿನ ಮೇಲೆ ಸಮತೋಲನ ಕಾಯ್ದುಕೊಂಡು ಅಕ್ಕಪಕ್ಕ ವೀಕ್ಷಿಸುತ್ತಿರುವ ಗೀಜಗ.



ತೆಂಗಿನ ಗರಿಯನ್ನು ಸೀಳಿ ತರಲು ರೆಕ್ಕೆ ಬೀಸಿದ ಗೀಜಗ

# ಗೀಜಗನ ಗೂಡು.. ಸೋಜಿಗದ ಹಾಡು!

■ ಚಿತ್ರ– ಬರಹ:
**ಉತ್ತಮ್ ನಾಯಕ್**

ಗುಬ್ಬಚ್ಚಿ ಬಳಗಕ್ಕೆ ಸೇರುವ ಈ ಗೀಜಗ ಅತ್ಯಂತ ಪರಿಶ್ರಮ ಜೀವಿ. ನೇಕಾರ ಹಕ್ಕಿಯೆಂದೇ ಇದನ್ನು ಗುರುತಿಸಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಪ್ಲೊಶಿಯಸ್ ಫಿಲಿಪ್ಪಿನಸ್.

ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೆ ಹೋಲುತ್ತದೆ. ಆದರೆ ಬಣ್ಣಗಳಲ್ಲಿ ಪ್ರಧಾನವಾಗಿ ಹಳದಿ ಮತ್ತು ಕಪ್ಪು ಬಣ್ಣದ ಮಿಶ್ರಣವನ್ನು ಕಾಣಬಹುದು. ಇದು ಗಂಡು ಗೀಜಗದ ಮೈ ಬಣ್ಣವಾದರೆ, ಹೆಣ್ಣು ಗೀಜಗವು ಸಾಮಾನ್ಯವಾಗಿ ಗುಬ್ಬಚ್ಚಿಯ ಬಣ್ಣವನ್ನೇ ಹೋಲುತ್ತದೆ.

ಗೀಜಗ ತಾನು ಗೂಡು ಕಟ್ಟುವಾಗ ಅತಿಯಾದ ಚಾಣಾಕ್ಷತನ ಮೆರೆಯುತ್ತದೆ. ಇದು ಎಲ್ಲೆಂದರಲ್ಲಿ ಗೂಡನ್ನು ಕಟ್ಟುವುದಿಲ್ಲ. ಗೂಡು ಕಟ್ಟುವಾಗ ಕೆಳಗಡೆ ತಗ್ಗಾದ ಕಣಿವೆ, ಆಳವಾದ ಬಾವಿ, ನದಿ ಕೊಳ್ಳದ ಕಡೆ ಬಾಗಿರುವ ಕೊಂಬೆ, ಅಥವಾ ಎತ್ತರವಾದ ಮರದಲ್ಲಿ ಗೂಡನ್ನು ಕಟ್ಟುತ್ತದೆ. ಏಕೆಂದರೆ ಹಾವು, ಮುಂಗುಸಿ , ಬೆಕ್ಕು ಮೊದಲಾದ ಪ್ರಾಣಿಗಳಿಂದ ಮೊಟ್ಟೆಯನ್ನು ರಕ್ಷಿಸಲಿಕ್ಕೆ. ಒಂದು ಪಕ್ಷ ಯಾವುದಾದರು ಜೀವಿ ಮೊಟ್ಟೆಯನ್ನು ತಿನ್ನಲು ಪ್ರಯತ್ನಪಟ್ಟರೂ ಬಳುಕಾಡುವ ಕೊಂಬೆ ಕೆಳಗಿನ ಪ್ರಪಾತಕ್ಕೆ ಮುಖಮಾಡಿ ಶತ್ರುಗಳಿಗೆ ಅಪಾಯವನ್ನು ತಂದೊಡ್ಡುತ್ತದೆ. ಹಾಗಂತ ಮುರಿದು ಹೋಗುವಂತಹ ಕೊಂಬೆಯ ಮೇಲೇನೂ ಇದು ಗೂಡನ್ನು ಕಟ್ಟವುದಿಲ್ಲ. ಇದು ಆಯ್ಕೆ ಮಾಡುವ ಕೊಂಬೆ ಸಾಕಷ್ಟು ಬಲವಾಗಿಯೇ ಇರುತ್ತದೆ.

ಭತ್ತ, ತೆಂಗು, ಜೋಳ, ಕಬ್ಬು ಮೊದಲಾದ ಬೆಳೆಗಳಿರುವ ಪಕ್ಕದಲ್ಲಿ ಇವು ಗೂಡನ್ನು ಕಟ್ಟುತ್ತವೆ. ಏಕೆಂದರೆ ಗೂಡು ಕಟ್ಟಲು ಬೇಕಾಗುವ ನಾರು ಈ ಬೆಳೆಗಳಿಂದ ಹೇರಳವಾಗಿ ದೊರಕುತ್ತವೆ. ಅಲ್ಲದೆ ಈ ಬೆಳೆಗಳಿಗೆ ನೀರು ನಿರಂತರವಾಗಿ ಪೂರೈಕೆಯಾಗಬೇಕಾಗಿರುವುದರಿಂದ ನೀರಿನ ಸಮಸ್ಯೆಯೂ ಉದ್ಭವಿಸುವುದಿಲ್ಲ. ಮನುಷ್ಯರಂತೆ ಕೈಗಳು ಇಲ್ಲದಿದ್ದರೂ ಬರೀ ಕೊಕ್ಕು ಮತ್ತು ಪಾದಗಳನ್ನು ಬಳಸಿ ಗೂಡು ನಿರ್ಮಿಸುವ ಪರಿಗೆ ಯಾವ ತಂತ್ರಜ್ಞಾನವೂ ಕೂಡಾ ಸಾಟಿಯಾಗಲಾರದು. ಮೊದಮೊದಲು ನಾರನ್ನು ತಂದು ಕಟ್ಟುವಾಗ

**(8ನೇ ಪುಟ ನೋಡಿ)**